# ಅಧ್ಯಾಯ - ೧

# ಅಧ್ಯಯನ ಉದ್ದೇಶ, ವ್ಯಾಪ್ತಿ ಮತ್ತು ಮಹತ್ವ

# ಅಧ್ಯಾಯ -೧

## ಅಧ್ಯಯನದ ಉದ್ದೇಶ ವ್ಯಾಪ್ತಿ ಮತ್ತು ಮಹತ್ವ :

**ಸುಗಮ ಸಂಗೀತ ಮತ್ತು ಆಧುನಿಕ ಕನ್ನಡ ಕವಿತೆ** ಎಂಬುದು ಈ ಮಹಾಪ್ರಬಂಧದ ವಿಷಯವಾಗಿದ್ದು, ಅದರ ಅಧ್ಯಯನದ ಕ್ರಮವನ್ನು ,ಅಧ್ಯಯನದ ಉದ್ದೇಶ ವ್ಯಾಪ್ತಿ ಮತ್ತು ಮಹತ್ವ ಈ ಮೂರು ಹಂತಗಳಲ್ಲಿ ಸ್ಪಷ್ಟ ಪಡಿಸಿಕೊಳ್ಳಬಹುದು.

### ೧.೧ ಅಧ್ಯಯನದ ಉದ್ದೇಶ :

ಸುಗಮ ಸಂಗೀತವು ಆಧುನಿಕ ಕನ್ನಡ ಕಾವ್ಯದ ಒಂದು ಅವಿಭಾಜ್ಯ ಅಂಗ. ಅಭಿಜಾತಸಂಗೀತ, ಚಿತ್ರಸಂಗೀತ, ಜನಪದ ಸಂಗೀತ ಮತ್ತು ರಂಗ ಸಂಗೀತಗಳಂತೆ ; ಸುಗಮ ಸಂಗೀತಕ್ಕೆ ತನ್ನದೇ ಆದ ವಿಶಿಷ್ಟ ಹಾಗೂ ವಿಭಿನ್ನವಾದ ಅಭಿವ್ಯಕ್ತಿಯ ಶೈಲಿಯಿದೆ. ಇದು ಸಂಪೂರ್ಣ ಸಾಹಿತ್ಯನಿಷ್ಠ ಸಂಗೀತದ ಮಾದರಿಯಾಗಿದೆ. ಮೂಲತಃ ಪ್ರತಿಭಾವಂತ ಕವಿಗಳಿಂದ ರಚನೆಯಾದ ಕವಿತೆ ಇದರ ಪ್ರಮುಖ ನೆಲೆ.

ಇಲ್ಲಿಯ ಅಧ್ಯಯನವು ನಾಲ್ಕು ಪ್ರಧಾನ ಆಶಯಗಳನ್ನು ಕೇಂದ್ರ ಕಾಳಜಿಯಾಗಿ ಹೊಂದಿದೆ. ಅವುಗಳೆಂದರೆ ,-

೧. ಕನ್ನಡ ಕಾವ್ಯ ಮತ್ತು ಹಾಡುಗಾರಿಕೆಯ ಸಂಬಂಧ.

೨. ಇತರೆ ಸಂಗೀತದ ಮಾದರಿಗಳಿಂದ ಭಿನ್ನವಾದ ಸುಗಮಸಂಗೀತದ ಸಾಹಿತ್ಯಿಕ ನೆಲೆಯನ್ನು ಗುರುತಿಸುವುದು.

೩. ಗೇಯರೂಪದ ಆಧುನಿಕ ಕನ್ನಡ ಕವಿತೆ (ಭಾವಗೀತೆ )ಯ ಸಾಹಿತ್ಯದ ಸ್ವರೂಪವನ್ನು ಗುರುತಿಸುವುದು.

೪. ಕಾವ್ಯ ಸಂವಹನದ ಒಂದು ವಿಧಾನವಾಗಿ ಭಾವಗೀತೆಯ ಹಾಡುಗಾರಿಕೆಯನ್ನು ಪರಿಭಾವಿಸುವುದು.

ಪ್ರಕೃತಿಯೆ ಸಂಗೀತದ ಮೂಲ ಮಾತೃಕೆ. ಭಾಷೆಗಿಂತ ಮೊದಲು ಸಂಗೀತ ಹುಟ್ಟಿದೆ ಎಂಬ ಅಭಿಪ್ರಾಯವಿದೆ. ಹಾಡುತ್ತಲೇ ಜನಪದ ಕಾವ್ಯ ರೂಪು ತಾಳಿತು. ಕನ್ನಡ ಕಾವ್ಯ ಆದ್ಯಂತಿಕವಾಗಿ ಇಂದಿನವರೆಗೂ ಹಾಡುಗಾರಿಕೆಯೊಂದಿಗೆ ತನ್ನ ಸಾತತ್ಯವನ್ನು ಕಾಪಾಡಿಕೊಂಡು ಬಂದಿದೆ. ಗಮಕಿಗಳು ಪ್ರಾಚೀನ ಕಾಲದಿಂದಲೂ ಕಾವ್ಯವನ್ನು ಹಾಡಿಕೊಂಡೆ ಬಂದಿದ್ದಾರೆ. - ' ಅನುವೊಲಿದಂತೆ ಹಾಡುವ ' ವಚನ - ಸ್ವರ ಪದಗಳೊಂದಿಗೆ , ದಾಸರ ಕೀರ್ತನೆಗಳು, ತತ್ವಪದ ,

ಜಾವಳಿಗಳು ; ಕಾವ್ಯ ಮತ್ತು ಹಾಡುಗಾರಿಕೆಗೆ ಉತ್ತಮ ನಿದರ್ಶನಗಳಾಗಿವೆ. ಆಧುನಿಕ ಕನ್ನಡ ಕಾವ್ಯ ದೇಸಿ ಛಂದಸ್ಸಿನಲ್ಲಿ ಸಾಧಿಸಿದ ಅನನ್ಯವಾದ ಮತ್ತು ವೈವಿಧ್ಯಮಯವಾದ ಛಂದೋಲಯಗಳು ಕನ್ನಡ ಭಾವಗೀತೆಯ ಹಾಡುಗಾರಿಕೆಗೆ ಅನುಕೂಲಕರವಾಗಿ ಸ್ಪಂದಿಸಿದೆ. ಕನ್ನಡ ಕಾವ್ಯ, ನವ್ಯರ ಕಾಲಘಟ್ಟದಲ್ಲಿ ಕೊಂಚ ಹಾಡುಗಾರಿಕೆಯ ಸ್ವರದಿಂದ ವಿಚಲಿತಗೊಂಡಿದ್ದರೂ ; ನವ್ಯೋತ್ತರ ಭಾವಗೀತೆಗಳು ಹಾಡುಗಾರಿಕೆಯೊಂದಿಗಿನ ತಮ್ಮ ಸಂಬಂಧವನ್ನು ಪುನರ್‌ಸ್ಥಾಪಿಸಿಕೊಳ್ಳುವಲ್ಲಿ ಯಶಸ್ವಿಯಾಗಿವೆ. **ಸಂಗೀತ ಮತ್ತು ಕಾವ್ಯದ ಸಂಬಂಧ ,ಆಧುನಿಕ ಕನ್ನಡ ಕಾವ್ಯ ಮತ್ತು ಸುಗಮ** ಸಂಗೀತ ಅಧ್ಯಾಯಗಳಲ್ಲಿ ಈ ಕುರಿತಾದ ವಿವರ ಚರ್ಚೆಯನ್ನು ಮಾಡಲಾಗಿದೆ.

ಶಾಸ್ತ್ರೀಯ ಸಂಗೀತದಿಂದ, ಸುಗಮ ಸಂಗೀತದ ಹಲವು ಕಾಲಘಟ್ಟದಲ್ಲಿ ನಿಧಾನವಾಗಿ ಮತ್ತು ಹಂತಹಂತವಾಗಿ ಸಾಹಿತ್ಯವು ಸಂಗೀತದ ಮೇಲೆ ಹಿಡಿತ ಸಾಧಿಸಿದ ಪ್ರಕ್ರಿಯೆಯು ಕುತೂಹಲವೂ ಸ್ವಾರಸ್ಯಪೂರ್ಣವೂ ಆಗಿದೆ. ಅಭಿಜಾತ ಸಂಗೀತದಲ್ಲಿ ; ಔಪಚಾರಿಕ ನೆಲೆಯಲ್ಲಿ ವ್ಯವಹರಿಸುವ ಸಾಹಿತ್ಯವು ,ಸುಗಮ ಸಂಗೀತದಲ್ಲಿ ಸಂಪೂರ್ಣ ಮೇಲ್ಮೆಯನ್ನು ಪಡೆಯಿತು. ಶಾಸ್ತ್ರೀಯತೆಯ ಪ್ರಮೇಯಗಳಿಗನುಸಾರವಾಗಿ ನಡೆದುಕೊಳ್ಳುತ್ತಿದ್ದ ಸಂಗೀತ,ಕವಿತೆಯ ಭಾವಾರ್ಥ ನಾದಾರ್ಥಗಳತ್ತ ತನ್ನ ನಿಷ್ಠೆಯನ್ನು ಬದಲಿಸಿಕೊಂಡಿತು. ಸಂಗೀತದ ವಿಭಿನ್ನ ಮಾದರಿಗಳೊಂದಿಗೆ ಸಾಹಿತ್ಯ ಹೊಂದಿರುವ ಸಂಬಂಧದ ಕುರಿತಾದ ವಿವರ ಚರ್ಚೆ ಯನ್ನು ಮೂರನೆ ಅಧ್ಯಾಯದಲ್ಲಿ ಮಾಡಲಾಗಿದೆ. ಆಧುನಿಕ ಕನ್ನಡ ಕಾವ್ಯದ ಅನೇಕ ವೈಶಿಷ್ಟ್ಯಗಳಲ್ಲಿ ಅದು ಸಾಧಿಸಿದ ವಸ್ತುವೈವಿಧ್ಯ, ಭಾವನಾವೀನ್ಯಗಳು ಕನ್ನಡ ಕಾವ್ಯದ ಹೊಸತನಕ್ಕೆ ಮುಖ್ಯ ಕಾರಣಗಳಾಗಿವೆ. ಪಾಶ್ಚಾತ್ಯರ - Lyric, ಬಂಗಾಳಿಯ - ರವೀಂದ್ರಸಂಗೀತ, ಶರಣರ - ಸ್ವರಪದ, ದಾಸರ -ಕೀರ್ತನೆಗಳಂತಹ ವಿಭಿನ್ನ ಮಾದರಿಗಳನ್ನು ಕಂಡಿರುವ ನವೋದಯ ಕವಿಗಳು 'ಭಾವಗೀತೆ 'ಯಂಥ ಹೊಸದೊಂದು ಕಾವ್ಯ ಪ್ರಕಾರವನ್ನು ಹುಟ್ಟುಹಾಕಿದರು. ಇದು ಸುಗಮ ಸಂಗೀತದಂತಹ ಹೊಸದೊಂದು ಸಾಹಿತ್ಯನಿಷ್ಠವಾದ ಸಂಗೀತದ ಮಾದರಿಯೊಂದು ರೂಪುಗೊಳ್ಳಲು ಕಾರಣವಾಯಿತು. ಬಿ. ಎಂ. ಶ್ರೀ, ಗೋವಿಂದ ಪೈ, ಮಾಸ್ತಿ, ಬೇಂದ್ರೆ, ಕುವೆಂಪು ಕೆ. ಎಸ್.ನರಸಿಂಹಸ್ವಾಮಿ - ಹೀಗೆ ಅನೇಕ ಕವಿಗಳು ತಮ್ಮ ಕಾವ್ಯ ಕೃಷಿಯ ಮೂಲಕ ಕನ್ನಡ ಭಾವಗೀತೆಯ ಹಾಡುಗಾರಿಕೆಗೆ ಅಗತ್ಯವಾಗಿದ್ದ ಸಾಮಾಗ್ರಿಯನ್ನು ಪೂರೈಸಿದರು. ಐದು ಮತ್ತು ಆರನೇ ಅಧ್ಯಾಯದಲ್ಲಿ ಈ ಕುರಿತಾದ ವಿವರಗಳನ್ನು ನೀಡಲಾಗಿದೆ.

ನಿಯತ ಲಯದಲ್ಲಿ ರಚನೆಯಾದ ಭಾವಗೀತೆಗಳ ಸಾಹಿತ್ಯದ ಸ್ವರೂಪ ವಿಶಿಷ್ಟವಾದದ್ದು. ಪಲ್ಲವಿ -ಅನುಪಲ್ಲವಿ - ನುಡಿಗಳು ಹಾಡುಗಾರಿಕೆಗೆ ಪೂರಕವಾಗಿವೆ. ಇವುಗಳ ಸಾಹಿತ್ಯಿಕ ಗುಣಮಟ್ಟ, ಸಹಜವಾದ ಲಯ ಪ್ರಾಸಗಳ ಆಕರ್ಷಣೆ, ವೈವಿಧ್ಯಮಯವಾದ ನಾದ-ಭಾವಗಳ ಮೋಹಕತೆ ಬೆರಗುಗೊಳಿಸುವಂಥದ್ದು. ನವ್ಯಪೂರ್ವ ಮತ್ತು ನವ್ಯೋತ್ತರ ಕಾಲಘಟ್ಟದಲ್ಲಿ ರಚನೆಯಾಗಿರುವ ಭಾವಗೀತೆಗಳ ನಡುವೆ ಕೂಡ ಅನೇಕ ಸೂಕ್ಷ್ಮ ವ್ಯತ್ಯಾಸಗಳಿವೆ. ಈ ವಿವರಗಳನ್ನು **ಆರನೇ ಅಧ್ಯಾಯದಲ್ಲಿ** ವಿವರಿಸಲಾಗಿದೆ.

ಸುಗಮ ಸಂಗೀತಕ್ಕೆ ಕನ್ನಡ ಕಾವ್ಯದ ಹೊರತಾಗಿ ಅಸ್ತಿತ್ವವಿಲ್ಲ. ಆದ್ದರಿಂದ ಇದನ್ನು ಆಧುನಿಕ ಕವಿತೆಯ ಒಂದು ಭಾಗವಾಗಿಯೇ ನಾವು ಗ್ರಹಿಸಬೇಕಾಗಿದೆ. ಗಮಕದ ಆಧುನಿಕ ರೂಪವಾದ ಸುಗಮ ಸಂಗೀತ ಕಾವ್ಯ ಸಂವಹನದ ಪರಿಣಾಮಕಾರಿ ವಿಧಾನವಾಗಿದೆ. ಕವಿತೆಯ ವಾಚನಕ್ಕೆ ಹತ್ತಿರವಾಗಿರುವಂತೆ ಸಂಗೀತ ಸಂಯೋಜಿಸುವ ಸ್ವರ

ಸಂಯೋಜನೆಯ ತತ್ವ ವನ್ನು ಇದು ಒಪ್ಪಿಕೊಂಡಿದೆ. ಹಾಡುಗಾರಿಕೆಯೆಂಬುದು ಕವಿತೆಯ ಉತ್ಪ್ರೇಕ್ಷಿತವಾದ ವಾಚನದ ರೂಪ. ಇದರಿಂದಾಗಿ ಅದು ಹೆಚ್ಚು ಹೆಚ್ಚುಸಾಹಿತ್ಯನಿಷ್ಠವಾಗುತ್ತಾ ಸೈದ್ಧಾಂತಿಕ ನೆಲೆಗಟ್ಟನ್ನುರೂಪಿಸಿಕೊಳ್ಳಲು ಸಾಧ್ಯವಾಗಿದೆ. **ಸುಗಮ ಸಂಗೀತದಲ್ಲಿ ಅಭಿವ್ಯಕ್ತಿಯ ಭಿನ್ನ ನೆಲೆಗಳು (೬.೩)** ಎಂಬ ಉಪಶೀರ್ಷಿಕೆಯಲ್ಲಿ ಈ ವಿವರಗಳನ್ನು ಭಾವಗೀತೆಯ ಗಾಯನದ ವಿಭಿನ್ನ ಶೈಲಿಗಳೊಂದಿಗೆ ವಿಶ್ಲೇಷಿಸಲಾಗಿದೆ.

## ೧.೨ ಅಧ್ಯಯನದ ವ್ಯಾಪ್ತಿ :

ಆಧುನಿಕ ಸಾಹಿತ್ಯದ ಕಾವ್ಯ ಪ್ರಕಾರಗಳಲ್ಲಿ ಭಾವಗೀತೆಗೆ ವಿಶಿಷ್ಠವಾದ ಸ್ಥಾನವಿದೆ. ಪ್ರತಿಭಾವಂತ ಕವಿ ಮನಸ್ಸಿನಿಂದ ಹೊರಹೊಮ್ಮಿ ಬರುವ, ಭಾವದ ಅಕ್ಷರ ರೂಪವಾದ ಭಾವಗೀತೆಯ ಹಾಡುಗಾರಿಕೆಯೆ ಸುಗಮ ಸಂಗೀತ. ಭಾವಗೀತೆಯ ಹುಟ್ಟಿನೊಂದಿಗೆ ಸುಗಮಸಂಗೀತದ ಹಾಡುಗಾರಿಕೆಯೂ ಆರಂಭಗೊಂಡಿತು. ಇಲ್ಲಿಯ ಅಧ್ಯಯನದ ವ್ಯಾಪ್ತಿಯು ಪ್ರಧಾನವಾಗಿ ಎರಡು ಕಾಲಘಟ್ಟದಲ್ಲಿ ರಚನೆಯಾದ ಭಾವಗೀತೆಗಳನ್ನು ಒಳಗೊಂಡಿದೆ.

೧. ನವೋದಯ ಕಾಲಘಟ್ಟದಲ್ಲಿ ರಚನೆಯಾದ ಭಾವಗೀತೆಗಳು.

೨. ನವ್ಯೋತ್ತರ ಕಾಲಘಟ್ಟದಲ್ಲಿ ರಚನೆಯಾಗಿರುವ ಭಾವಗೀತೆಗಳು.

ಆಧುನಿಕ ಕನ್ನಡ ಕಾವ್ಯದಲ್ಲಿ ರಚನೆಗೊಂಡಿರುವ ಕವಿತೆಗಳನ್ನು ಎರಡು ವಿಭಾಗಗಳಾಗಿ ವಿಂಗಡಿಸಬಹುದು. ಅನಿಯತ ಲಯದಲ್ಲಿ ರಚನೆಯಾಗಿ ಕೇವಲ ಓದಿಕೊಳ್ಳಬಹುದಾದ ಕವಿತೆಗಳು. ಓದುವುದರ ಜತೆಯಲ್ಲಿ ಕವಿತೆಯ ಅರ್ಥ, ನಾದ, ಭಾವಗಳನ್ನು ಹೊಮ್ಮಿಸುವಂತೆ ಭಾವಪೂರ್ಣವಾಗಿ ಹಾಡಬಹುದಾದ ಕವಿತೆಗಳು. ಇವು ನಿಯತ ಲಯದಲ್ಲಿ ರಚನೆಯಾಗಿವೆ.

೧. ಅನಿಯತ ಲಯದಲ್ಲಿ ರಚನೆಯಾದವು - ಕವಿತೆ

೨. ನಿಯತ ಲಯದಲ್ಲಿ ರಚನೆಯಾದವು -ಭಾವಗೀತೆ

ಎರಡನೆಯ ಮಾದರಿಯನ್ನು ಸುಗಮ ಸಂಗೀತ ತನ್ನ ಮೂಲ ಸಾಮಾಗ್ರಿಯಾಗಿ ಅವಲಂಬಿಸಿದೆ. ಪ್ರಸ್ತುತ ಅಧ್ಯಯನದಲ್ಲಿ ನಿಯತಲಯದಲ್ಲಿ ರಚನೆಯಾಗಿರುವ ಭಾವಗೀತೆಗಳನ್ನು ಮುಖ್ಯವಾಗಿ ಲಕ್ಷಿಸಲಾಗಿದೆ. ಸುಪ್ರಸಿದ್ಧ ಕಲಾವಿದರು ಹಾಡಿ ಜನಪ್ರಿಯಗೊಂಡಿರುವ ಭಾವಗೀತೆ -ಧ್ವನಿಸುರುಳಿಗಳನ್ನು ಇಲ್ಲಿ ಮುಖ್ಯ ಆಕರವಾಗಿ ಬಳಸಿಕೊಳ್ಳಲಾಗಿದೆ.

ಸಂಗೀತದೊಂದಿಗಿನ ಕಾವ್ಯದ ಸಂಬಂಧವನ್ನು ಗುರುತಿಸುವಾಗ ಹಳಗನ್ನಡ ಕಾವ್ಯ ಪರಂಪರೆಯನ್ನು ಸ್ಥೂಲವಾಗಿ ಗಮನಿಸಲಾಗಿದೆ. ಸುಗಮ ಸಂಗೀತದ ಪ್ರಾಚೀನ ಮಾದರಿಯಾದ ' ಗಮಕ ' ಹಳಗನ್ನಡ ಕಾವ್ಯಗಳೊಂದಿಗೆ ಹೊಂದಿರುವ ಸಾಮಾಜಿಕ ಸಂಬಂಧದ ನಿರ್ವಚನವನ್ನು ವಿಶ್ಲೇಷಿಸುವಾಗ, ಅನೇಕ ಹಳಗನ್ನಡ ಕಾವ್ಯ ಸಂದರ್ಭಗಳನ್ನು ಹಲವು ಕಾಲಘಟ್ಟಗಳಲ್ಲಿ ಗಮನಿಸಬೇಕಾದುದು ಅನಿವಾರ್ಯವು ಅಗತ್ಯವು ಆಗಿದೆ. ಈ ದೃಷ್ಟಿಯು ಆಂಶಿಕವಾಗಿದ್ದು ಅದನ್ನು ಕೇಂದ್ರ ಲಕ್ಷ್ಯವಾದ ಭಾವಗೀತೆಯ ಹಾಡುಗಾರಿಕೆಯ ವಿವೇಚನೆಗೆ ಪೂರಕವಾಗಿ ಮಾತ್ರ ಪರಿಗಣಿಸಲಾಗಿದೆ.

## ೧.೩ ಅಧ್ಯಯನದ ಮಹತ್ವ :

ಆಧುನಿಕ ಕನ್ನಡ ಕಾವ್ಯದ ಒಂದು ಭಾಗವಾಗಿರುವ ಸುಗಮ ಸಂಗೀತದ ಕುರಿತಂತೆ ಈವರೆಗೆ ಗಂಭೀರ ಸ್ವರೂಪದ ಅಧ್ಯಯನಗಳು ನಡೆದಿರುವುದಿಲ್ಲ. ಕನ್ನಡ ಭಾವಗೀತೆಯ ಹಾಡುಗಾರಿಕೆಯೊಂದಿಗೆ ಹೊಸಗನ್ನಡ ಕಾವ್ಯದ ಅಧ್ಯಯನಗಳು ನಡೆದಿರುವುದು ತೀರಾ ಅಪರೂಪ. ಭಾವಗೀತೆಯ ಕುರಿತಾದ ಅಧ್ಯಯನಗಳು ಕೂಡ ಆಂಶಿಕವಾಗಿ ಮತ್ತು ನಿಗದಿತ ಕಾಲಘಟ್ಟದಲ್ಲಿ ನಡೆದಿವೆ. ಕುವೆಂಪು ಮಾರ್ಗದರ್ಶನದಲ್ಲಿ ಡಾ. ಪ್ರಭುಶಂಕರರವರು ರಚಿಸಿದ 'ಕನ್ನಡದಲ್ಲಿ ಭಾವಗೀತೆ' (೧೯೬೬) ಡಾಕ್ಟರೇಟ್ ಪದವಿಗಾಗಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುವ ಕೃತಿ. ನವ್ಯ ಪೂರ್ವ ಕಾಲಘಟ್ಟದಲ್ಲಿ ರಚನೆಯಾದ ಕವಿತೆಗಳನ್ನಿಲ್ಲಿ ಅವಲೋಕಿಸಲಾಗಿದೆ. ಹಾಡುಗಾರಿಕೆಗೆ ಸಲ್ಲದ ಕವಿತೆಗಳನ್ನು ಕೂಡ ಇಲ್ಲಿಯ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಬೇಂದ್ರೆ ಭಾವಗೀತೆಗಳ ಕುರಿತಾದ ಕಾವ್ಯ ಸ್ವರೂಪದ ಚರ್ಚೆ ಕುರಿತಂತೆ, ಕೃಷ್ಣಕಟ್ಟಿಯವರ ಪ್ರಯತ್ನ ಉಲ್ಲೇಖನೀಯ. ಈ ಗ್ರಂಥದ ಹೆಸರು 'ಬೇಂದ್ರೆ ಮತ್ತು ಕನ್ನಡ ಭಾವಗೀತದ ಸ್ವರೂಪ ' (೧೯೯೬). ಹಾಡುಗಾರಿಕೆಗೆ ಒಳಪಡುವ ಭಾವಗೀತೆಗಳ ಸಮಗ್ರ ಅಧ್ಯಯನವು ಈವರೆಗೂ ನಡೆದಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನವು ಮಹತ್ವಪೂರ್ಣವಾದದ್ದು ಎಂದು ನನ್ನ ಭಾವನೆಯಾಗಿದೆ.

ಕನ್ನಡ ಭಾವಗೀತೆಗಳ ಜನಪ್ರಿಯತೆಗೆ ಕಾರಣವಾದ ಸುಗಮಸಂಗೀತದ ಕುರಿತಾಗಿ ಇತ್ತೀಚೆಗೆ ಹೆಚ್ಚು ಹೆಚ್ಚು ಚರ್ಚೆಗಳು, ಅಭಿಪ್ರಾಯಗಳು ವ್ಯಕ್ತಗೊಳ್ಳತೊಡಗಿವೆ. ಸಾಹಿತಿಗಳು ವಿಮರ್ಶಕರು ಕಾವ್ಯ ಸಂವಹನದ ಒಂದು ಸಾಧ್ಯತೆಯಾಗಿ ಕಾವ್ಯಗಾಯನವನ್ನು ಗಂಭೀರವಾಗಿ ಪರಿಗಣಿಸುತ್ತಿದ್ದಾರೆ. ಆದರೆ ಶಾಸ್ತ್ರೀಯ ಸಂಗೀತದಿಂದ ಅದನ್ನು ಪ್ರತ್ಯೇಕಿಸಿ ಸಾಹಿತ್ಯಿಕ ನೆಲೆಯಲ್ಲಿ ನೋಡುವ ಪ್ರಯತ್ನ ಇತ್ತೀಚಿನವರೆಗೂ ನಡೆದಿರಲಿಲ್ಲ. ಕನ್ನಡದ ಸೃಜನಶೀಲ ಗಾಯಕ ಸಿ. ಅಶ್ವತ್ಥ್ 'ಸುಗಮ ಸಂಗೀತ ' ( ೧೯೮೮ ) ಎಂಬ ಪುಸ್ತಕದಲ್ಲಿ ಈ ಗಾಯನ ಪ್ರಕಾರಕ್ಕೆ ಸ್ಪಷ್ಟ ಸ್ವರೂಪವನ್ನು ನೀಡುವ ಪ್ರಯತ್ನ ಮಾಡಿದ್ದಾರೆ. ಸುಗಮ ಸಂಗೀತಕ್ಕೆ ಅಶ್ವತ್ಥ್ ರಿಂದಲೇ ಒಂದು ಖಚಿತವಾದ ಸೈದ್ಧಾಂತಿಕ ಚೌಕಟ್ಟು ಪ್ರಾಪ್ತವಾಯಿತು ಎನ್ನಬಹುದು. ಭಾವಗೀತೆಯ ಕಲಾವಿದರಿಗೆ ಅಗತ್ಯ ಕೈಪಿಡಿಯಂತಿರುವ ಈ ಪುಸ್ತಕ ಕನ್ನಡ ಸುಗಮಸಂಗೀತದ ಚರಿತ್ರೆಯಲ್ಲಿ ಐತಿಹಾಸಿಕ ಮಹತ್ವವನ್ನು ಪಡೆದುಕೊಂಡಿದೆ. ಸುಗಮ ಸಂಗೀತದ ಹಿರಿಯ ಕಲಾವಿದೆ ಹೆಚ್.ಆರ್.ಲೀಲಾವತಿಯವರ 'ಸುಗಮ ಸಂಗೀತ :ಒಂದು ಸಿಂಹಾವಲೋಕನ ' (೧೯೯೭) ಕನ್ನಡ ಭಾವಗೀತೆಯ ಹಾಡುಗಾರಿಕೆಯನ್ನು ಕುರಿತ ಇನ್ನೊಂದು ಮಹತ್ವದ ಕೃತಿ. ಸುಗಮ ಸಂಗೀತದ ಅಂತಃಸತ್ವವನ್ನು ಭಾವಗೀತೆಯೊಂದಿಗೆ ವಚನ ಹರಿದಾಸ ಸಾಹಿತ್ಯದಲ್ಲಿ ಹುಡುಕುವ ಪ್ರಯತ್ನ ಇಲ್ಲಿದೆ. ಆದಾಗ್ಯೂ ಅಶ್ವತ್ಥ್‌ರ ನಿಶಿತವಾದ ಸೈದ್ಧಾಂತಿಕ ತಳಹದಿ, ವೈಚಾರಿಕವಾದ ತರ್ಕ- ಸಮರ್ಥನೆಗಳು ಈ ಕೃತಿಯಲ್ಲಿ ಕಂಡು ಬರುವುದಿಲ್ಲ. ಅಶ್ವತ್ಥ್ ೬೦ ರ ಅಭಿನಂದನ ಗ್ರಂಥ 'ತಂಬೂರಿ' (೧೯೯೯) ಸುಗಮ ಸಂಗೀತ ಕ್ಷೇತ್ರದಲ್ಲಿ ಮಹತ್ವಪೂರ್ಣವಾದ ಕೃತಿ. ಜಿ. ಎಸ್. ಶಿವರುದ್ರಪ್ಪ,ಚೆನ್ನವೀರ ಕಣವಿ, ಎನ್. ಎಸ್.ಲಕ್ಷ್ಮೀನಾರಾಯಣ ಭಟ್ಟ, ಎಚ್. ಎಸ್. ವೆಂಕಟೇಶ್ ಮೂರ್ತಿ, ಕೀರ್ತಿನಾಥ ಕುರ್ತಕೋಟಿ, ಜಯಶ್ರೀ ಅರವಿಂದ ಮೊದಲಾದವರ ಉಪಯುಕ್ತವಾದ ಲೇಖನಗಳು ಇಲ್ಲಿವೆ. ಸುಗಮ ಸಂಗೀತದ ಅನೇಕ ಮಜಲುಗಳನ್ನು ಕುರಿತ ವಿದ್ವಾಂಸರ ಅಭಿಪ್ರಾಯಗಳ ಚರ್ಚೆ ಇಲ್ಲಿದೆ. ಅಶ್ವತ್ಥ್‌ರ 'ಸ್ವರ ಮಾಧುರಿ ' (೧೯೯೭) ಕೃತಿಯಲ್ಲಿ ಹೆಚ್.ಎಸ್.ವೆಂಕಟೇಶಮೂರ್ತಿಯವರ ಮುನ್ನುಡಿ, ಹೊಂಬಾಳೆ ಪ್ರತಿಭಾರಂಗದ ನೆನಪಿನ ಸಂಚಿಕೆ 'ಪ್ರತಿಭಾ ಸಂಕುಲ ' ಗಳಲ್ಲಿ ಎನ್. ಎಸ್.ಲಕ್ಷ್ಮೀನಾರಾಯಣ ಭಟ್ಟ, ಕೆ. ಎಸ್.ನಿಸಾರ್

ಅಹ್ಮದ್ , ಅಶ್ವತ್ಥ್ ಮೊದಲಾದವರ ಬರಹಗಳು ಸುಗಮ ಸಂಗೀತದ ಮುಖ್ಯ ನೆಲೆಗಳನ್ನು ಕುರಿತಾಗಿ ವಿವರಿಸುತ್ತವೆ. ಬಿ.ವಿ.ಕೆ. ಶಾಸ್ತ್ರಿ ಸಂಪಾದಿಸಿದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು, ಇವರು ಪ್ರಕಟಿಸಿರುವ 'ಗಾನಕಲಾಮಂಜರಿ' ಸಂಪುಟ:ಒಂದು(೧೯೫೫) ಸಂಪುಟ: ಎರಡು (೧೯೯೮) ಗಳಲ್ಲಿ ಭಾವಗೀತೆಯ ಹಾಡುಗಾರಿಕೆಯ ಕುರಿತಾದ ಲೇಖನಗಳಿವೆ. ಅ.ನ.ಕೃಷ್ಣರಾಯರು ಸಂಪಾದಿಸಿರುವ 'ಭಾರತೀಯ ಕಲಾದರ್ಶನ'(೧೯೫೩-೫೪) ಕೃತಿಯಲ್ಲಿನ ರಾ. ಸತ್ಯನಾರಾಯಣರವರ 'ಸಂಗೀತದಲ್ಲಿ ರಸಪ್ರತಿಪಾದನೆ ' ಎಂಬ ಲೇಖನದಲ್ಲಿ ಸಾಹಿತ್ಯ - ಸಂಗೀತದ ಕುರಿತಾದ ಚರ್ಚೆಯಿದೆ. ಎಸ್.ಎಸ್.ಲಕ್ಷ್ಮೀನಾರಾಯಣ ಭಟ್ಟರ ಅಭಿನಂದನ ಗ್ರಂಥ 'ನೀಲಾಂಜನ ' (೧೯೯೬) ದಲ್ಲಿ ಕೆಲವು ಬರಹಗಾರರ ಉಪಯುಕ್ತ ಲೇಖನಗಳಿವೆ. ಬಸವರಾಜ ಕಲ್ಗುಡಿ ಸಂಪಾದಿಸಿರುವ 'ಕನ್ನಡ ವಾರ್ಷಿಕ ೧೯೯೧' (೧೯೯೨) ಮತ್ತು ಮಳಲಿ ವಸಂತಕುಮಾರ್ ಸಂಪಾದಿಸಿರುವ 'ವಜ್ರದೀಪ್ತಿ'(೧೯೯೦) ಕೃತಿಗಳಲ್ಲಿಯೂ ಭಾವಗೀತೆಯ ಹಾಡುಗಾರಿಕೆ ಕುರಿತಾದ ಅನೇಕ ಲೇಖನಗಳಿವೆ. ಸಂಗೀತ ಸಂಯೋಜಕಿ ಜಯಶ್ರೀ ಅರವಿಂದ್‌ರವರು ಡಿ,ಲಿಟ್. ಪದವಿಗಾಗಿ ಸಿದ್ಧಪಡಿಸಿರುವ 'ಸುಗಮ ಸಂಗೀತ: ಒಂದು ಸಮಗ್ರ ಅಧ್ಯಯನ' (ಅಪ್ರಕಟಿತ) ಕನ್ನಡ ಸುಗಮಸಂಗೀತದ ಇತಿಹಾಸದಲ್ಲಿ ಒಂದು ಮಹತ್ವಪೂರ್ಣ ಕೃತಿಯಾಗಿದೆ. ಆದರೆ ಭಾವಗೀತೆಯ ಗಾಯನವನ್ನು ಸಂಗೀತದ ನೆಲೆಯಲ್ಲಿ ಪರಿಭಾವಿಸಿರುವುದು ಇಲ್ಲಿಯ ಅಧ್ಯಯನದ ಮುಖ್ಯ ದೋಷ ಎನ್ನಬಹುದು. ಸುಗಮ ಸಂಗೀತ ಶಾಸ್ತ್ರೀಯ ಸಂಗೀತದ ಒಂದು ಭಾಗ ಅಲ್ಲವೇ ಅಲ್ಲ. ಅದನ್ನು ಸಂಗೀತದ ನೆಲೆಯಿಂದ ನೋಡುವುದು ಒಂದು ಅನರ್ಥಕಾರಿ ಪ್ರಯತ್ನವಾಗುತ್ತದೆ. ಭಾವಗೀತೆಯ ಹಾಡುಗಾರಿಕೆಯ ಕುರಿತಾಗಿ ಗಂಭೀರ ಅಧ್ಯಯನ ಮಾಡುವಾತನಿಗೆ ಅಗತ್ಯವಾಗಿ ಬೇಕಾದದ್ದು ಕನ್ನಡ ಕಾವ್ಯದ ತಿಳುವಳಿಕೆಯೇ ವಿನಃ ಸಂಗೀತಶಾಸ್ತ್ರದ ಪ್ರಮೇಯಗಳಲ್ಲ. ಈ ಹಿನ್ನೆಲೆಯಲ್ಲಿ ಸುಗಮ ಸಂಗೀತ ಮತ್ತು ಕನ್ನಡ ಕವಿತೆಯ ಸಾಹಿತ್ಯಿಕ ಅಧ್ಯಯನ ಮಹತ್ವಪೂರ್ಣವಾದ ಪ್ರಯತ್ನವೆಂದು ಹೇಳಬಹುದು.

ಸುಗಮ ಸಂಗೀತವನ್ನು ಆಧುನಿಕ ಕನ್ನಡ ಕವಿತೆಯ ಒಂದು ಭಾಗವಾಗಿ ನೋಡುವುದು ಮತ್ತು ಅದನ್ನು ಸಾಹಿತ್ಯಿಕ ನೆಲೆಯಲ್ಲಿಯೇ ಪರಿಭಾವಿಸುವ ಪ್ರಯತ್ನ ಇಂದಿನ ದಿನಗಳಲ್ಲಿ ಅತ್ಯಂತ ಮಹತ್ವಪೂರ್ಣವಾದದ್ದು. ಇಲ್ಲಿಯ ಬರವಣಿಗೆಯು ಕವಿತೆಗಳನ್ನು ಕೇಂದ್ರವಾಗಿಸಿಕೊಂಡು ನಡೆಸುವ ಅಧ್ಯಯನವಾಗಿದ್ದು; ಸುಗಮ ಸಂಗೀತದ ನೆಲೆಯು ಆನುಷಂಗಿಕವಾಗಿದೆ. ಈ ಅಧ್ಯಯನದಲ್ಲಿ ಭಾವಗೀತೆಗಳು ಅಭಿವ್ಯಕ್ತಿಗೊಳ್ಳುವ ಕ್ರಮದಲ್ಲಿ ಪ್ರಧಾನವಾಗಿ ಹಾಡುವಿಕೆಯು ಹೇಗೆ ಮುಖ್ಯವಾಗಿದೆ ಎಂಬುದನ್ನು ಪರಿಶೀಲಿಸಲಾಗಿದೆ. ಸಂವಹನ ಮಾಧ್ಯಮವಾಗಿ ಹಾಡುವಿಕೆಯನ್ನು ಹೇಗೆ ಗ್ರಹಿಸಲಾಗಿದೆ ಎಂಬುದನ್ನು ಪ್ರಸ್ತಾವಿಸಲಾಗಿದೆಯೇ ಹೊರತು, ಇಲ್ಲಿ ಸಂಗೀತದ ಶಾಸ್ತ್ರಗಳು ಅಧ್ಯಯನದ ಕೇಂದ್ರವಲ್ಲ.

ಭಾವಗೀತೆಯ ಹಾಡುಗಾರಿಕೆಗೆ ಸಂಬಂಧಿಸಿದಂತೆ ಸಾಹಿತ್ಯದ ಒಂದು ವಲಯದಿಂದ ವಿರೋಧವೂ ಇದೆ. ಸುಗಮ ಸಂಗೀತದ ಪ್ರಸ್ತುತತೆ ಮತ್ತು ಸಮಕಾಲೀನತೆಗಳ ಹಿನ್ನೆಲೆಯಲ್ಲಿ ಇದು ಮಹತ್ವಪೂರ್ಣವಾದ ಚರ್ಚೆಯೂ ಹೌದು. ಈ ಕುರಿತಾದ ವಾದ-ವಿವಾದ ವಿದ್ವಾಂಸರ ಅಭಿಪ್ರಾಯಗಳನ್ನು ಸೋದಾಹರಣೆಗಳ ಸಹಿತ ಚರ್ಚಿಸಲಾಗಿದೆ (೪.೪). ಒಟ್ಟಿನಲ್ಲಿ ಈ ಅಧ್ಯಯನದ ಮಹತ್ವ ಕುರಿತಂತೆ ಕೆಲವು ಮುಖ್ಯಾಂಶಗಳನ್ನು ಇಲ್ಲಿ ಸಂಗ್ರಹಿಸಬಹುದು.

೧. ನಿಯತಲಯದ ಭಾವಗೀತೆಗಳ ಸಾಹಿತ್ಯಿಕ ಅಧ್ಯಯನ.

೨. ನವ್ಯೋತ್ತರ ಭಾವಗೀತೆಗಳ ಕಾವ್ಯ ಸ್ವರೂಪ.

೩. ಸುಗಮ ಸಂಗೀತದ ಸೈದ್ಧಾಂತಿಕ ನೆಲೆಯನ್ನು ಸ್ಪಷ್ಟಗೊಳಿಸುವುದು.

೪. ಸುಗಮ ಸಂಗೀತವನ್ನು ಆಧುನಿಕ ಕವಿತೆಯ ಒಂದು ಭಾಗವಾಗಿ ಗ್ರಹಿಸುವುದು.

೫. ಸುಗಮ ಸಂಗೀತವನ್ನು ಸಾಹಿತ್ಯಿಕ ನೆಲೆಯಲ್ಲಿ ಪರಿಭಾವಿಸುವುದು.

ಪ್ರಸ್ತುತ ಅಧ್ಯಯನಕ್ಕೆ ಆಧುನಿಕ ಕವಿಗಳ ಕವನ ಸಂಕಲನಗಳನ್ನು ಮತ್ತು ಧ್ವನಿಸುರುಳಿಗಳನ್ನು ಬಳಸಿಕೊಳ್ಳಲಾಗಿದೆ. **ಸುಗಮ ಸಂಗೀತ ಮತ್ತು ಆಧುನಿಕ ಕನ್ನಡ ಕವಿತೆ** - ಕುರಿತು ಅಧ್ಯಯನ ಮಾಡುವಾಗ ಮೊದಲು ಸಾಂಪ್ರದಾಯಿಕ ಅಧ್ಯಯನದ ಪರಿಕರಗಳ ಹಿನ್ನೆಲೆಯೊಂದಿಗೆ, ಆಧುನಿಕ ವಿಮರ್ಶೆಗೆ ಒದಗಿಬಂದಿರುವ ಚಿಂತನಾಕ್ರಮ, ಪರಿಕಲ್ಪನೆ, ಸಾಮಗ್ರಿಗಳನ್ನು ಬಳಸಿದ ವಿಶ್ಲೇಷಣೆಯೊಂದಿಗೆ ಒಂದು ಹೊಸ ದೃಷ್ಟಿಯನ್ನು ತಂದು ಕೊಡಲು ಪ್ರಯತ್ನಿಸಲಾಗಿದೆ. ಆದಾಗ್ಯೂ , ಅಂತರ ಶಿಸ್ತೀಯ ಅಧ್ಯಯನಗಳು ಮಹತ್ವಪಡೆದಿರುವ ಇಂದಿನ ದಿನಗಳಲ್ಲಿ ಸಾಹಿತ್ಯದ ಜೊತೆಗೆ ಸುಗಮ ಸಂಗೀತ ಹೊಂದಿರುವ ಸಂಬಂಧವನ್ನು ಕುರಿತಂತೆ ಈ ಅಧ್ಯಯನವು ಪ್ರಾಮಾಣಿಕ ಪ್ರಯತ್ನವೆಂದು ನಮ್ರತೆಯಿಂದ ಹೇಳಬಯಸುತ್ತೇನೆ.